**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 01.04.2024:</u>**

**<u>ಮುಖ್ಯ ವಿಚಾರಣೆಃ 2 ನೇ ಪಕ್ಷಗಾರರ ಪರವಾಗಿ ಶ್ರೀ ವಿ ಎನ್ ಎಸ್ ವಕೀಲರಿಂದ ಶ್ರೀ ಜೆ ಪಿ ಎಲ್ ವಕೀಲರ ಪರವಾಗಿಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳನ್ನು ನಾನೇ ಬರೆಸಿದ್ದು, ಸದರಿ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿ ನಾನು ನನ್ನ ಸಹಿ ಮಾಡಿರುತ್ತೇನೆ.

2.1 ನೇ ಪಕ್ಷಗಾರರ ಕಾರ್ಮಿಕರಿಗೆ 2 ನೇ ಪಕ್ಷಗಾರರು ದಿನಾಂಕ 04.05.2018 ರಂದು ನೀಡಿರುವ ಕಾರಣ ಕೇಳುವ ಸೂಚನಾ ಪತ್ರ, ಸದರಿ ಸೂಚನಾ ಪತ್ರಕ್ಕೆ 1 ನೇ ಪಕ್ಷಗಾರರು ದಿನಾಂಕ 11.06.2018 ರಂದು ನೀಡಿರುವ ಉತ್ತರ, ತನಿಖಾ ಸಿಬ್ಬಂದಿಯ ವರದಿ ಮತ್ತು ಅದರ ಅಡಕಗಳು, ವಾಹನದ ಲಾಗ್ ಶೀಟ್, ದಿನಾಂಕ 23.03.2018 ರ ಅಪರಾಧ ಜ್ಞಾಪನಾ ಪತ್ರ, 1 ನೇ ಪಕ್ಷಗಾರರಿಗೆ ನೀಡಿರುವ 3 ವಿಚಾರಣಾ ಸೂಚನಾ ಪತ್ರಗಳು, ಪ್ರಾಥಮಿಕ ವಿಚಾರಣಾ ಹಾಳೆ, ಶಿಸ್ತು ಪ್ರಕರಣದಲ್ಲಿ ಆಡಳಿತ ಪರ ಸಾಕ್ಷಿ ಲಿಂಗರಾಜುವಿನ ಸಾಕ್ಷಿ ವಿಚಾರಣೆ, 1 ನೇ ಪಕ್ಷಗಾರ ಕಾರ್ಮಿಕ ಪರ ಮಾದೇಶ್ ಎನ್ನುವವರ ಸಾಕ್ಷಿ ವಿಚಾರಣೆ, 1 ನೇ ಪಕ್ಷಗಾರ ಕಾರ್ಮಿಕರು ವಿಚಾರಣಾಧಿಕಾರಿಯವರ ಮುಂದೆ ನಿಯಮ 23(18)ರ ಅನ್ವಯ ನೀಡಿರುವ ಹೇಳಿಕೆ ಆಪಾದಿತ ನೌಕರನಿಂದ ಪಡೆದ ಸ್ಪಷ್ಟೀಕರಣದ ಜೊತೆಯಲ್ಲಿ, ಸದರಿ ಸ್ಪಷ್ಟೀಕರಣದ ಜೊತೆಯಲ್ಲಿ ಹಾಜರುಪಡಿಸಿದ ಕಾನೂನು ತಿಳುವಳಿಕೆ ಪತ್ರ (ವಕೀಲರ ನೋಟೀಸು), ಈ ಮೇಲೆ ಹೇಳಿರುವ ಸಾಕ್ಷಿ ಮಾದೇಶರವರು 2 ನೇ ಪಕ್ಷಗಾರರ ಸಂಸ್ಥೆಯ ವಿಭಾಗ ನಿಯಂತ್ರಣಾಧಿಕಾರಿಯವರಿಗೆ ದಿನಾಂಕ 24.03.2018 ರಂದು ಬರೆದು ಪತ್ರ, ಸದರಿ ಪತ್ರವನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಬಗ್ಗೆ ಅಂಚೆ ರಶೀದಿ ಮತ್ತು ಒಂದು ಬಸ್ ಟಿಕೇಟ್,

1 ನೇ ಪಕ್ಷಗಾರ ಕಾರ್ಮಿಕರು ನೀಡಿರುವ ಸಂರಕ್ಷಣಾತ್ಮಕ ಹೇಳಿಕೆ, ವಿಚಾರಣಾ ವರದಿ, ಆಂತರಿಕ ವಿಚಾರಣೆಯ ಆದೇಶ ಪುಟಗಳು, ದಿನಾಂಕ 18.08.2018 ರಂದು 1 ನೇ ಪಕ್ಷಗಾರ ನೌಕರನಿಗೆ ನೀಡಿರುವ ಕಾರಣ ಕೇಳುವ ಸೂಚನಾ ಪತ್ರ, ಸದರಿ ಸೂಚನಾ ಪತ್ರಕ್ಕೆ 1 ನೇ ಪಕ್ಷಗಾರ ನೌಕರನು ನೀಡಿರುವ ಉತ್ತರ, 1 ನೇ ಪಕ್ಷಗಾರರಿಗೆ ಸಂಬಂಧಪಟ್ಟ ಹಿಸ್ಟರಿ ಶೀಟ್, 2 ನೇ ಪಕ್ಷಗಾರ ಆಡಳಿತ ವರ್ಗವು ಮಾಡಿದ ಆದೇಶದ ಹಾಳೆ, 1 ನೇ ಪಕ್ಷಗಾರ ನೌಕರನ ವಿರುದ್ದ ದಿನಾಂಕ 01.01.2019 ರಂದು ಮಾಡಿರುವ ಶಿಕ್ಷಾ ಆದೇಶವನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಶಾನೆ ಆರ್.1 ರಿಂದ ನಿಶಾನೆ ಆರ್.25 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಶ್ರೀ ಜೆ ಡಿ ಎಸ್ ರವರಿಂದ 2 ನೇ ಪಕ್ಷಗಾರರ ಪ್ರತಿನಿಧಿಃ</u>**

1 ನೇ ಪಕ್ಷಗಾರ ಕಾರ್ಮಿಕನ ವಿರುದ್ಧ ನಡೆದ ವಿಚಾರಣೆಯಲ್ಲಿ ಅಥವಾ ಬೇರೆ ಯಾವುದೇ ಕ್ರಮದ ನಡವಳಿಕೆಯಲ್ಲಿ ನಾನು ಭಾಗಿಯಾಗಿಲ್ಲ. 2 ನೇ ಪಕ್ಷಗಾರರ ಪರವಾಗಿ ಹಾಜರುಪಡಿಸಿರುವ ನಿಶಾನೆ ಆರ್.1 ರಿಂದ ನಿಶಾನೆ ಆರ್.25 ದಾಖಲೆಗಳಲ್ಲಿ ನನ್ನ ಸಹಿಗಳೂ ಇಲ್ಲ ಮತ್ತು ಸದರಿ ದಾಖಲೆಗಳಿಗೆ ಸಂಬಂಧಪಟ್ಟ ನಡವಳಿಕೆಗಳಲ್ಲಿ ನಾನು ಪಾಲ್ಗೊಂಡಿಲ್ಲ. ಶ್ರೀ ಹೆಚ್.ವಿ.ರಾಮಚಂದ್ರರಾವ್ ರವರು ಈಗಲೂ ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ.ಯ ಬೆಂಗಳೂರು ಕೇಂದ್ರ ವಿಭಾಗದಲ್ಲಿ ವಿಚಾರಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರ ಸಂಸ್ಥೆಯ ನೌಕರರಿಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಸದರಿ ಹೆಚ್.ವಿ.ರಾಮಚಂದ್ರರಾವ್ ರವರು ಬೆಂಗಳೂರು ನ್ಯಾಯಾಲಯಗಳಲ್ಲಿ ಈಗಲೂ ಹಾಜರಾಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.ಈ ಕೇಸಿನಲ್ಲಿ ಸಾಕ್ಷಿ ನುಡಿಯುವಂತೆ ಕೋರಿ ಹೆಚ್.ವಿ.ರಾಮಚಂದ್ರರಾವ್ ರವರಿಗೆ ನಾವು ಯಾವುದೇ ಪತ್ರ ನೀಡಿಲ್ಲ, ಆದರೆ ದೂರವಾಣಿ ಮೂಲಕ ತಿಳಿಸಿರುತ್ತೇವೆ.

2. 2 ನೇ ಪಕ್ಷಗಾರರು 1 ನೇ ಪಕ್ಷಗಾರನ ವಿರುದ್ಧ ಮಾಡಿರುವ ವಿಚಾರಣೆಯಲ್ಲಿ 1 ನೇ ಪಕ್ಷಗಾರ ನೌಕರನ ಸಾಕ್ಷಿ ವಿಚಾರಣೆಯನ್ನು ಮಾಡಿಲ್ಲ ಎಂದರೆ ಸರಿ. ಸದರಿ ವಿಚಾರಣೆಯಲ್ಲಿ 1 ನೇ ಪಕ್ಷಗಾರ ನೌಕರರು ಹಾಜರುಪಡಿಸಿರುವ 5 ದಾಖಲೆಗಳಲ್ಲಿ ಈಗ ನಾವು 4 ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತೇವೆ ಮತ್ತು ಒಂದು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 2 ನೇ ಪಕ್ಷಗಾರರು ಮಾಡಿರುವ ವಿಚಾರಣೆಯಲ್ಲಿ 1 ನೇ ಪಕ್ಷಗಾರ ನೌಕರನ ಸಾಕ್ಷಿ ವಿಚಾರಣೆ ಮಾಡಲು ಅವಕಾಶ ನೀಡಿಲ್ಲ ಎಂದರೆ ಸರಿಯಲ್ಲ. ಹಿಸ್ಟರಿ ಶೀಟ್ ಗೆ ಪ್ರತಿವರ್ಷದ ಮಾರ್ಚ್ 31 ರೊಳಗೆ ಸಂಬಂಧಪಟ್ಟ ನೌಕರನ ಸಹಿ ಪಡೆದು ಅದರ ಪ್ರತಿಯನ್ನು ನೌಕರರಿಗೆ ನೀಡಬೇಕು ಎಂದರೆ ಸರಿ. ಈ ಕೇಸಿನಲ್ಲಿ ಹಾಜರುಪಡಿಸಿರುವ ನಿಶಾನೆ ಆರ್.23 ದಾಖಲೆಯಲ್ಲಿ 1 ನೇ ಪಕ್ಷಗಾರ ನೌಕರನ ಸಹಿ ಮಾಡಿಸಿಲ್ಲ ಎಂದರೆ ಸರಿ. 1 ನೇ ಪಕ್ಷಗಾರ ನೌಕರರನ್ನು 31.03.2017 ಕ್ಕಿಂತ ಹಿಂದೆಯೇ ಸಂಸ್ಥೆಯಲ್ಲಿ ಇದ್ದಿಲ್ಲ, ಈ ಕಾರಣದಿಂದ ಸದರಿ ದಾಖಲೆಗೆ ಅವರ ಸಹಿ ಪಡೆದಿಲ್ಲ.

3. ಈಗ ತೋರಿಸಿದ ನಿಶಾನೆ ಪಿ.1 ದಾಖಲೆಯಂತೆ 1 ನೇ ಪಕ್ಷಗಾರ ನೌಕರನ ಪ್ರೊಬೇಷನರಿ ಅವಧಿ 2012 ರಲ್ಲಿ ಘೋಷಿಸಲ್ಪಟ್ಟಿರುತ್ತದೆ ಮತ್ತು 2014 ರಲ್ಲಿ 1 ನೇ ಪಕ್ಷಗಾರರ ಸೇವೆಯನ್ನು ಬಿ.ಎಂ.ಟಿ.ಸಿ. ಸಂಸ್ಥೆಯಲ್ಲಿ ಖಾಯಂ ಮಾಡಲಾಗಿದೆ ಎಂದರೆ ಸರಿ. 2 ನೇ ಪಕ್ಷಗಾರ ಸಂಸ್ಥೆಯಲ್ಲಿ ತರಬೇತಿಯಲ್ಲಿರುವ ನೌಕರರಿಗೆ ತರಬೇತಿ ಭತ್ಯೆ ಎಂದು ತಿಂಗಳಿಗೆ 2017-18 ನೇ ಸಾಲಿನಲ್ಲಿ ರೂ.10,000/- ಕ್ಕಿಂತ ಕಡಿಮೆ ನೀಡುತ್ತಿದ್ದರು ಎಂದರೆ ಸರಿ. 1 ನೇ ಪಕ್ಷಗಾರ ಕಾರ್ಮಿಕನಿಗೆ ತಿಂಗಳಿಗೆ ರೂ.20,000/-ಕ್ಕಿಂತ ಜಾಸ್ತಿ ಸಂಬಳ ನೀಡುತ್ತಿದ್ದರು ಎಂದರೆ ಸರಿ. ನಿಶಾನೆ ಆರ್.15 ರಿಂದ ನಿಶಾನೆ ಆರ್.17 ದಾಖಲೆಗಳನ್ನು ನಾನು ಆಂತರಿಕ ವಿಚಾರಣೆಯಲ್ಲಿ ಹಾಜರುಪಡಿಸಿಲ್ಲ. ಈಗ ತೋರಿಸಿದ ದಾಖಲೆಯು

ದಿನಾಂಕ 31.05.2018 ರಂದು 2 ನೇ ಪಕ್ಷಗಾರ ಸಂಸ್ಥೆಯು ಘಟಕ ವ್ಯವಸ್ಥಾಪಕರಿಗೆ ಸಾರ್ವಜನಿಕ ದೂರಿನ ಬಗ್ಗೆ ಬರೆದಿರುವ ಪತ್ರ ಎಂದರೆ ಸರಿ. ಸದರಿ ದಾಖಲೆಯನ್ನು ನಿಶಾನೆ ಪಿ.17 ಎಂದು ಗುರುತಿಸಲಾಗಿದೆ. ಸಂಬಂಧಪಟ್ಟ ಬಸ್ಸಿನ ಚಾಲಕ ಮತ್ತು ನಿರ್ವಾಹಕರನ್ನು ನಾವು ಆಂತರಿಕ ವಿಚಾರಣೆಗೆ ಒಳಪಡಿಸಿಲ್ಲ. ತನಿಖಾಧಿಕಾರಿಯವರು ರೂ.4920/- ನ್ನು ಸಂಸ್ಥೆಯಲ್ಲಿ ಕಟ್ಟುವಂತೆ ನಿರ್ವಾಹಕನಿಗೆ ನೀಡಿದ್ದರು ಎಂದರೆ ಸರಿ. ಸದರಿ ನಿರ್ವಾಹಕರನ್ನು ಆಂತರಿಕ ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿ. 1 ನೇ ಪಕ್ಷಗಾರ ನೌಕರರ ವಿರುದ್ಧ ಅವರಿಗೆ ಸಾಕಷ್ಟು ಅವಕಾಶ ನೀಡಿ ಮತ್ತು ಕಾನೂನು ನಿಯಮದಂತೆ 2 ನೇ ಪಕ್ಷಗಾರ ಸಂಸ್ಥೆಯು ಆಂತರಿಕ ವಿಚಾರಣೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಯಾವುದೇ ವಿಚಾರ ನನಗೆ ಗೊತ್ತಿಲ್ಲದಿದ್ದರೂ ಸಹ 2 ನೇ ಪಕ್ಷಗಾರ ಸಂಸ್ಥೆಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**